ತುಮಕೂರು ಡಿಸ್ಟ್ರಿಕ್ಟ್.

1896ನೇ ಇಸವಿ ಮೇ ತಾರೀಖು ರಲ್ಲಾ.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ,—ತುಮಕೂರು ಮತ್ತು ಮದ್ದಗಿರಿ ಡಿಪೋದಲ್ಲಿರುವ ಈ ಕೆಳಗೆ ನಮೂದಾಗುವ ಸಾಮಾನುಗಳನ್ನು 1896ನೇ ಇಸವಿ ಜೂ೯ 15ರಲ್ಲಾ ತುಮಕೂರು ಡಿಪೋದಲ್ಲಿಯೂ 19ರಲ್ಲಿ ಮದ್ದಗಿರಿ ಡಿಪೋದಲ್ಲೂ ತುಮಕೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಿಂದ ಹರಾಜು ಮಾಡಲ್ಪಡುತ್ತೆ.

ತುಮಕೂರು ಡಿಪೋ.

ತರಹೆ.	ಸಂಖೆ.	ಸಲೆ. ಅಡಿ.	ಅಂಗುಲ.	ಸೆಟ್ಸ್.	ಪರಾ.
ಕ್ಯಾಗ	226	159	5	..	ಕೆಜ್ಜಿಕಡಮೆ.
ಉಳ್ಳೇಕಾಯಿ	32 ಮೂ	...	...	...	ಡಿಟೋ

ಮದ್ದಗಿರಿ ಡಿಪೋ.

ಕ್ಯಾಗ	365	320	3	3	ಡಿಟೋ
ಹುಲವೆ	1	..	8	0	..

ಹರಾಜು ಮೊಬಲಗು ಮುವತಿ ಆದ ತಾರೀಖು ಲಾಗಾಯತು ಇದರ ನಿಗೇವಾನಿ ಹರಾಜುದಾರನ್ನೇ ಹೊಂದಿರುತ್ತೆ.

ಪರತ್ತುಗಳು.—ಹರಾಜು ಖೈದಾದ ಕೂಡ್ಲೆ ಕಾಲುಹಿನ್ನೆ ಮೊಬಲಗು ಕೇವಣಿ ತರ್ಕ್ ಹಾಜರ್ಮಾಡಬೇಕು. ಬಾಕಿ ಮೊಬಲಗನ್ನು ಹರಾಜು ತಾರೀಖು ಲಾಗಾಯತು 1 ವಾರದ ಒಳಗಾಗಿ ಹಾಜರ್ಮಾಡಬೇಕು. ಇದಕ್ಕೆ ತಪ್ಪಿದರೆ ದುಸರೆ ಹರಾಜು ಮಾಡಲ್ಪಡುವದಲ್ಲದೆ ಲುಕ್‌ಸಾನಿಗೆ ಮೊದಲು ಹರಾಜುದಾರನ್ನು ಗುರಿಮಾಡಲ್ಪಡುತ್ತೆ. ಸಾಮಾನುಗಳನ್ನೆಲ್ಲಾ ಹರಾಜು ತಾರೀಖು ಲಾಗಾಯತು 10 ದಿವಸದ ಒಳಗಾಗಿ ಸಾಗಿಸಿಕೊಳ್ಳಬೇಕು. ಇತರ ರೂಲ್ಸ್‌ಗಳಿಗೆ 1895ನೇ ಇಸವಿ ಏಪ್ರಿಲ್ 25ನೇ ಮಕ್ಕುಂ ಮೈಸೂರ ಗೆಜೆಟ್ 1ನೇ ಭಾಗದಲ್ಲಿ ಪ್ರಕಟಿಸಿರುವ 1895ನೇ ಇಸವಿ ಮಾರ್ಚ್ 15ನೇ ಮತ್ತು 15229ನೇ ನಂಬರ್ ಗವರ್ನಮೆಂಟ್ ನೋಟಿಫಿಕೇಷನ್ ನೋಡಿ.

ನೋಟಿಫಿಕೇಷನ್.

1896ನೇ ಇಸವಿ ಮೇ ಮಾಹೆ 24ನೇ ತಾರೀಖು.

ಮೈಸೂರು ದೇಶದ ಫಾರೆಸ್ಟ್ಸ್ ಜನರಾಲ್ ಕಮಿಸರೇಟರ್ ಸಾಹೆಬರವರ 1896ನೇ ಇಸವಿ ಮೇ ಮಾಹೆ 16ನೇ ತಾರೀಖಿನ 3845—153ನೇ ನಂಬರ್ ಡಾಕಿಟ್ ಅನುಸರಿಸಿ ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ,—ಮದ್ದಗಿರಿ ತಾಲ್ಲೂಕಿನಲ್ಲಿರುವ ಈ ಕೆಳಗೆ ನಮೂದು ಆಗಿರುವ ಪಿಸ್ಟ್ರಿಕ್ಟ್ ಜಂಗಲ್‌ಗಳು ಇನ್ನೊಂದು ಹುಕುಂ ಕೊಡುವ ಪರಿಯಂತ್ರ ನಾದೆ, ಮರ ಮುಟ್ಟು ಮುಂತಾದ ಸಾಮಾನುಗಳನ್ನ ಇವುಗಳಲ್ಲಿ ಯಾರೊಬ್ಬರೂ ಕಡಿಯದಂತೆ ಖಂದು ಮಾಡಲ್ಪಟ್ಟಿವೆ.

ಪಿಸ್ಟ್ರಿಕ್ಟ್ ಜಂಗಲ್ ಇರುವ ಹೋಬ್ಳಿ ಹೆಸರು.
ಮದ್ದಗಿರಿ.

ಪಿಸ್ಟ್ರಿಕ್ಟ್ ಜಂಗಲ್ ಹೆಸರು.
(1) ಕಟ್ಟಹಳ್ಳಿ
(2) ಬಿಳ್ಳಕಟ್ಟೆ
(3) ಕನಗೊಂಡಹಳ್ಳಿ
(4) ಹೊಸಹಳ್ಳಿ
(5) ತಾಯಿಗೊಂಡನಹಳ್ಳಿ
(6) ಗುರ್ರಮ್ಮನಹಳ್ಳಿ
(7) ಚಿನಕವಜ್ಜ

ಎಂ. ವೆಂಕಟನಾರಣಪ್ಪ,
ಡಿ|| ಫಾರೆಸ್ಟ್ ಆಫಿಸರ್.